ಕರಕುಶಲ ಅಭಿವೃದ್ಧಿ ನಿಗಮಕ್ಕೆ ಗಂಧದ ಮರಗಳ ಸರಬರಾಜು.

1647 (1875) : **ಶ್ರೀ ರಾಮಲಿಂಗಾರೆಡ್ಡಿ (ಜಯನಗರ)** : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮಕ್ಕೆ ವರ್ಷಕ್ಕೆ ಸರಾಸರಿ ಬೇಕಾಗುವ ಗಂಧದ ಪ್ರಮಾಣವೆಷ್ಟು;

(ಆ) ಸದರಿ ನಿಗಮಕ್ಕೆ ಗಂಧದ ಮರಗಳ ಸರಬರಾಜು ಸಮರ್ಪಕವಾಗಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಹಾಗಿದ್ದಲ್ಲಿ, ಈ ನಿಗಮಕ್ಕೆ ಬೇಕಾಗುವ ಗಂಧವನ್ನು ಸರಬರಾಜು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್. ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :

(ಅ) ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮಕ್ಕೆ ವರ್ಷಕ್ಕೆ ಸರಾಸರಿ 80 ಟನ್‌ಗಳಷ್ಟು ಗಂಧವು ಬೇಕಾಗುತ್ತದೆ.

(ಆ) ಹೌದು. ರಾಜ್ಯ ಅರಣ್ಯ ಇಲಾಖೆಯಿಂದ 1999-2000ನೇ ಸಾಲಿಗೆ 11,750 ಮೆಟ್ರಿಕ್ ಟನ್ ಗಂಧವನ್ನು ಬಿಡುಗಡೆ ಮಾಡಲಾಗಿದೆ. ತಮಿಳುನಾಡು ಅರಣ್ಯ ಇಲಾಖೆಯಿಂದ ನಿಗಮವು 14.211 ಮೆಟ್ರಿಕ್ ಟನ್ ಗಂಧವನ್ನು ಪಡೆದಿರುತ್ತದೆ.

(ಇ) ನಿಗಮವು ತನ್ನ ಬೇಡಿಕೆಯನ್ನು ಪೂರೈಸಿಕೊಳ್ಳಲು ಇತರೆ ರಾಜ್ಯಗಳಿಂದ ಗಂಧವನ್ನು ಪಡೆಯುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಆಂಗ್ಲೋ ಇಂಡಿಯನ್ ಜನಾಂಗದವರಿಗೆ ಒದಗಿಸಿರುವ ಸೌಲಭ್ಯ.

1648 (1904) : **ಶ್ರೀ ರೋಜರ್ ಬಿನ್ನಿ (ನಾಮಾಂಕಿತ)** : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದಲ್ಲಿ ಒಟ್ಟು ಆಂಗ್ಲೋಇಂಡಿಯನ್ ಜನಾಂಗದವರ ಜನಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಆ) ಇದರಲ್ಲಿ ಮಹಿಳೆಯರ ಜನಸಂಖ್ಯೆ ಎಷ್ಟು;

(ಇ) ಈ ಜನಾಂಗದವರುಗಳಿಗೆ ಸರ್ಕಾರದಿಂದ ನೀಡಲಾಗುತ್ತಿರುವ ಸೌಲತ್ತುಗಳಾವುವು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

(ಅ) ಆಂಗ್ಲೋಇಂಡಿಯನ್ ಜನಸಂಖ್ಯೆಯ ಬಗ್ಗೆ ಜನಗಣತಿ ಸಮೀಕ್ಷೆಯನ್ನು ರಾಜ್ಯ ಸರ್ಕಾರವು ನಡೆಸಿರುವುದಿಲ್ಲ. ಕಾರಣ ನಿಖರವಾಗಿ ರಾಜ್ಯದಲ್ಲಿ ಎಷ್ಟು ಆಂಗ್ಲೋಇಂಡಿಯನ್ ಇದ್ದಾರೆ ಎಂಬುದರ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ.